ಶ್ರೀ ಚೌಡರೆಡ್ಡಿ:– 1 ಲಕ್ಷ ರೂಪಾಯಿಗಳಿಗೆ ಮಾತ್ರ ನನ್ನ ಹತ್ತಿರ ಫಿಗರ್ಸ್ ಇಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿರುವುದು.

ಶ್ರೀ ಜಿ.ಎಸ್. ಯಡಿಯೂರಪ್ಪ:– ಬಿಡುಗಡೆ ಆಗದಿದ್ದರೆ ಉಳಿದ ಹಣದ ಜೊತೆಗೆ ಇದನ್ನು ಸೇರಿಸಿ ಬಿಡುಗಡೆ ಮಾಡುತ್ತೀರಾ ?

ಶ್ರೀ ಚೌಡರೆಡ್ಡಿ:– 9 ಲಕ್ಷ ಆದ ಮೇಲೆ 1 ಲಕ್ಷ ರೂಪಾಯಿ ಬಿಡುಗಡೆ ಮಾತ್ರ ಮಾಡಬೇಕು ಅದನ್ನು ಮುಂದಿನ ವರ್ಷ ಬಿಡುಗಡೆ ಮಾಡುತ್ತೇನೆ.

ಶ್ರೀ ಜಿ.ಎಸ್. ಯಡಿಯೂರಪ್ಪ:– ಕೊಟ್ಟಿದ್ದರೆ ನಮ್ಮದೇನೂ ಆಭ್ಯಂತರ ಇಲ್ಲ. ಕೊಟ್ಟಿರದಿದ್ದರೆ ಬಿಡುಗಡೆ ಮಾಡುತ್ತೀರಾ ? ಈಗ 10 ಲಕ್ಷದಲ್ಲಿ 1 ಲಕ್ಷ ಮಾತ್ರ ಬಿಡುಗಡೆ ಆಗಿಲ್ಲ. ಅಂತ ತಾವು ಹೇಳುತ್ತಿದ್ದೀರಿ. ಬಿಡುಗಡೆ ಆಗದಿದ್ದರೆ ಬಿಡುಗಡೆ ಮಾಡುತ್ತೀರಾ ?

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ, ಈಗ ನಾವು ಇದನ್ನೆಲ್ಲಾ ಕೊಟ್ಟಿರತಕ್ಕಂಥಾದ್ದು ಡಿಸ್‌ಕ್ರಿಶನರಿ ಗ್ರಾಂಟ್. ಬೇರೆ ಇನ್ಯಾವುದರಲ್ಲೂ ನಮಗೆ ಹಣ ಇಲ್ಲ. ನಾವು ಒಂದು ಪ್ರೊಪೋಸಲ್ ಮುಖ್ಯಮಂತ್ರಿಗಳಿಗೆ ಕಳುಹಿಸಿ ಆಂದ್ರೆ ನಾವು ಕಳುಹಿಸುತ್ತೇವೆ. ಡಿಸ್‌ಕ್ರಿಶನರಿ ಗ್ರಾಂಟ್‌ನಲ್ಲಿ ನಾವು 9 ಲಕ್ಷ ರಿಲೀಸ್ ಮಾಡಿದ್ದೇವೆ. ಸೆಪರೇಟ್ ಆಗಿ ಬೇರೆ ಯಾವುದೂ ಇರುವುದಿಲ್ಲ.

ಬೆಂಗಳೂರಿನಲ್ಲಿ ವರ್ತುಲ ರೈಲ್ವೆ

360 (1834): ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):–

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದಲ್ಲಿ ವರ್ತುಲ ರೈಲ್ವೆಯನ್ನು ಪ್ರಾರಂಭಿಸಲು ರಾಜ್ಯ ಸರ್ಕಾರವು ನಿರ್ಧರಿಸಿರುವುದೆ;

ಆ) ಇದಕ್ಕೆ ಕೇಂದ್ರ ಸರ್ಕಾರದವರ ಸಮ್ಮತಿ ಸಿಕ್ಕಿದೆಯೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಬೆಂಗಳೂರು ನಗರದ ವರ್ತುಲ ರೈಲ್ವೆ ಕಾರ್ಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಪರಿಶೀಲನೆ ಎಂದರೆ ಏನು ?

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ ಅವರು ಕೇಳಿರತಕ್ಕಂಥ ಪ್ರಶ್ನೆ, ಬೆಂಗಳೂರು ನಗರದಲ್ಲಿ ವರ್ತುಲ ರೈಲ್ವೆಯನ್ನು ಪ್ರಾರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆಯೇ ? ಅದಕ್ಕೆ ಉತ್ತರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ನಾವು ಉತ್ತರ ಕೊಟ್ಟಿದ್ದೇವೆ. ಮೊದಲೇ 1988ರಲ್ಲಿ ಒಂದು ಪ್ರಪೋಸಲ್ ಬಂದಿತ್ತು. ಬೆಂಗಳೂರು ಸಿಟಿ ಎಗ್ಜಿಸ್ಟಿಂಟ್ ರೈಲ್ವೆ ಕಾರಿಡಾರ್ಸ್ ಇಂಪ್ರೂವ್‌ಮೆಂಟ್ ಮಾಡತಕ್ಕಂಥಾದ್ದು ಇದೆ. ಸೆಂಟ್ರಲ್ ಗೌರ್ನಮೆಂಟ್‌ನವರು ರೈಲ್ವೆ ನಡೆಸುತ್ತಾರೆ ಅದನ್ನು ಇಂಪ್ರೂವ್‌ಮೆಂಟ್ ಮಾಡತಕ್ಕಂಥಾದ್ದು, ಅದರಲ್ಲಿ ಬೆಂಗಳೂರು ಸಿಟಿಯಿಂದ ವೈಟ್‌ಫೀಲ್ಡ್, ಬೆಂಗಳೂರು ಸಿಟಿಯಿಂದ ಕೆಂಗೇರಿನಗರ, ಬೆಂಗಳೂರು ಸಿಟಿಯಿಂದ ಹೆಚ್.ಎಂ.ಟಿ. ನಗರ. ಇದಕ್ಕೆ

88ರಲ್ಲಿ ಪ್ರೊಪೋಸಲ್ ಆದರೂ ಕೂಡ, ಕಾರಣಾಂತರಗಳಿಂದ ವರ್ಲ್ಡ್ ಬ್ಯಾಂಕ್‌ನಿಂದ ಸಹಾಯ ಧನ ಬರಲಿಲ್ಲ. ನಾನು ಮತ್ತು ನಮ್ಮ ಮುಖ್ಯಮಂತ್ರಿಗಳು ಡಿಸೆಂಬರ್ ಜನವರಿಯಲ್ಲಿ ರೈಲ್ವೆ ಮಂತ್ರಿಗಳನ್ನು ಕರೆಯಿಸಿದಾಗ ಆದಕ್ಕೊಂದು 152 ಕೋಟಿ ರೂಪಾಯಿಗಳ ಎಸ್ಟಿಮೇಟ್ಸ್ ರೆಡಿ ಮಾಡಿ ಎಂದು ಕೇಂದ್ರ ರೈಲ್ವೆ ಮಂತ್ರಿಗಳನ್ನು ನಾವು ಕೇಳಿಕೊಂಡಿದ್ದೇವೆ. ಅವರು ತಕ್ಷಣ ತೆಗೆದುಕೊಳ್ಳುತ್ತೇವೆಂದು ನಮಗೆ ವಾಗ್ದಾನ ಮಾಡಿದ್ದಾರೆ. ಇದು ಪಾರ್ಟ್ ಎ. ಇದಾದ ಮೇಲೆ ಪಾರ್ಟ್ ಬಿ. Transit Corridor from Rajajinagar to Jayanagar – underground. ಇದು ರಾಜಾಜಿನಗರದಿಂದ ಹಿಡಿದು ಜಯನಗರದವರೆಗೂ, ಇದರಲ್ಲಿ ಕೆಲವು ಭಾಗಗಳು ಅಂಡರ್‌ಗ್ರೌಂಡ್ ಇದೆ, ಕೆಲವು ಭಾಗಗಳು ಸರ್‌ಫೇಸ್‌ನಲ್ಲಿದೆ, ಕೆಲವು ಭಾಗಗಳು ರೈಲ್ವೆಸವರು ತೆಗೆದುಕೊಳ್ಳಬೇಕೆಂದು ಹೇಳಿ ಒಟ್ಟು 1,000 ಕೋಟಿ ರೂಪಾಯಿಗಳಷ್ಟು ಅಂದಾಜು ಮಾಡಿದ್ದಾರೆ. ಇದನ್ನು ಕರ್ನಾಟಕ ಸರ್ಕಾರದವರು ಹಾಕಿಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದಲ್ಲಿ ಈಗಾಗಲೇ ನಾವು ಪ್ರಯತ್ನ ಮಾಡಿದ್ದೇವೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಸಹಾಯಧನ ಕೊಡುತ್ತೇವೆಂದು ದೆಲ್ಲಿಗೆ ಹೋದಾಗ ಅಲ್ಲಿನ ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದಾರೆ. ಅವರು ಆಶ್ವಾಸನೆ ಕೊಟ್ಟಿದ್ದಾರೆ. ಹೈದ್ರಾಬಾದ್‌ನಲ್ಲಿ ಕೂಡ ಇಂಥದ್ದೇ ತೆಗೆದುಕೊಂಡಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರದವರೂ ಕೂಡ ಸಹಾಯ ಮಾಡಿದ್ದಾರೆ. ಇದರ ರಿಪೋರ್ಟ್ ಕೂಡ ಇದೆ. ಇದನ್ನು ನಾವು ನಿಮಗೂ ಕಳುಹಿಸಿಕೊಡುತ್ತೇನೆ. ನಾವು ಮಾಡಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇವೆ. ನಮಗೆ ಕಮಿಟ್‌ಮೆಂಟ್ ಇದೆ. ಇನ್ನು ಅವರು ವರ್ತುಲ ರೈಲ್ವೆ ಬಗ್ಗೆ ಹೇಳಿದ್ದಾರೆ.

ಇದರ ಬಗ್ಗೆ ನಾವು ಇನ್ನೂ ಚಿಂತನೆ ಮಾಡಿಲ್ಲ. ವರ್ತುಲ ರೈಲ್ವೆ ಮಾಡಬೇಕಾದರೆ, ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದರ ಬಗ್ಗೆ ಹೆಚ್ಚಾಗಿ ಗಮನ ಕೊಟ್ಟಿಲ್ಲ, ಏಕೆಂದರೆ ಇವು ಎರಡೂ ಮುಗಿದ ಮೇಲೆ ತೆಗೆದುಕೊಳ್ಳಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ ವರ್ತುಲ ರೈಲ್ವೆ ಬಗ್ಗೆ ನಾನು ಕೇಳಿದ್ದುದು. ಇದು ಪರಿಶೀಲನೆಯಲ್ಲಿದೆ ಎಂದು ಸನ್ಮಾನ್ಯ ಮಂತ್ರಿಗಳು ಈ ಸಭೆಗೆ ದಯಪಾಲಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಫೆಬ್ರವರಿ 18ನೇ ತಾರೀಖಿ ಬೆಂಗಳೂರಿನಲ್ಲಿ ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದಾರೆ.

ಬೆಂಗಳೂರು ವರ್ತುಲ ರೈಲ್ವೆ ನಿರ್ಮಾಣ ಏಪ್ರಿಲ್ ನಂತರ, ಶೇಕಡ 10ರಷ್ಟು ಕೇಂದ್ರ ಸರ್ಕಾರದಿಂದ ಪೂರೈಕೆ ಅನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಇದು ನಿಜವೇ ? ಮುಂದಿನ ಹಣಕಾಸು ವರ್ಷ ಎಂದರೆ, 93ನೇ ಇಸವಿಗೆ ಇನ್ನು 18 ದಿನ ಉಳಿದಿದೆ. ಏಪ್ರಿಲ್‌ನಿಂದ ಪ್ರಾರಂಭ ಆಗುತ್ತದೆಯೇ ? ಇದಕ್ಕೆ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೆ, ನಾನು ಹೇಳಿಕೆ ಕೊಟ್ಟಿದ್ದುದು ನಿಜ. ಮೆಟ್ರೋ ಮತ್ತು ವರ್ತುಲ ರೈಲ್ವೆ ಕಾಮಗಾರಿಯನ್ನು ಎರಡು ಮೂರು ಹಂತದಲ್ಲಿ ತೆಗೆದುಕೊಳ್ಳಬೇಕೆಂದು ಅದರ ಬಗ್ಗೆ ಬಿ.ಡಿ.ಎ. ಅಧ್ಯಕ್ಷರಾದ ಎಸ್. ಬಿ. ಮುದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ. ಆ ಸಮಿತಿಯಲ್ಲಿ ಈ ಕೆಲಸಗಳನ್ನು ಯಾವ ರೀತಿ ಕ್ರಿಯಾತ್ಮಕವಾಗಿ ಮಾಡಬೇಕೆಂಬ ಚರ್ಚಿಸಿ ಒಂದು ವರದಿಯನ್ನು ತಯಾರು ಮಾಡಿ ಆ ವರದಿಯನ್ನು ಈಗಾಗಲೇ ಕೇಂದ್ರ ರೈಲ್ವೆ ಮಂತ್ರಿಯವರಿಗೆ ಮತ್ತು ಕೇಂದ್ರ ನಗರಾಭಿವೃದ್ಧಿ ಮಂತ್ರಿಯವರಿಗೆ ಸಲ್ಲಿಸಿದ್ದೇವೆ. ಅವರ ಜೊತೆಯಲ್ಲಿ ಇದರ ಬಗ್ಗೆ ಮಾತುಕತೆ ಕೂಡ ನಡೆಸಿದ್ದೇವೆ. ಇದಕ್ಕೆ ಕೇಂದ್ರ ರೈಲ್ವೆ ಮಂತ್ರಿಯವರೂ ತಾತ್ವಿಕವಾದ ಒಪ್ಪಿಗೆಯನ್ನು ಕೊಟ್ಟಿದ್ದಾರೆ ಹೈದರಾಬಾದ್‌ನಲ್ಲಿ ಈ ರೀತಿ ವರ್ತುಲ ರೈಲ್ವೆ ಮತ್ತು ಮೆಟ್ರೋ ಮಾಡಿದಾಗ ಕೇಂದ್ರವು ಒಂದು ತಾತ್ವಿಕವಾದ ನಿರ್ಣಯವನ್ನು ತೆಗೆದುಕೊಂಡು ಇದೇ ರೀತಿ ಬೇರೆ ರಾಜ್ಯಗಳಲ್ಲೂ ವರ್ತುಲ

ಮತ್ತು ಮೆಟ್ರೋ ಕಾರ್ಯವನ್ನು ಮಾಡಿದಾಗ ಅದಕ್ಕೆ ಒಪ್ಪಿಗೆ ಕೊಡುವುದೆಂದು ಮಾಡಿದೆ. ಆ ನಿರ್ಣಯದ ಉಪಯೋಗವನ್ನು ನಾವು ಪಡೆದುಕೊಂಡು ನಮ್ಮ ಬೆಂಗಳೂರು ನಗರದಲ್ಲೂ ವರ್ತುಲ ಮತ್ತು ಮೆಟ್ರೋ ಯೋಜನೆಗಳನ್ನು ಮಾಡಬೇಕು. ಈ ವರ್ತುಲ ರೈಲ್ವೆ ಮಾಡುವ ಬಗ್ಗೆ ಈಗಾಗಲೇ ಎಲ್ಲಾ ಸರ್ವೇ ಆಗಿದೆ. ಬಹುಶಃ ಎಲ್ಲಾ ಕಡೆ ಸರ್ಫೇಸ್‌ನಲ್ಲೇ ಮಾಡಲಿಕ್ಕೆ ಸಾಧ್ಯವಿದೆ. ಒಂದೆರಡು ಕಡೆ ಮಾತ್ರ ಅಂಡರ್ ಗ್ರೌಂಡ್‌ನಲ್ಲಿ ಹೋಗಬೇಕಾಗಿದೆ. ಆದ್ದರಿಂದ ಇದಕ್ಕೆ ವ್ಯಾಪಕವಾದ ಮತ್ತು ಸಮಗ್ರವಾದ ಒಂದು ಯೋಜನೆ ಸಿದ್ಧವಾಗಿದೆ. ಇದರ ಬಗ್ಗೆ ಕೇಂದ್ರದ ನಗರಾಭಿವೃದ್ಧಿ ಮಂತ್ರಿಗಳ ಜೊತೆ ಮಾತನಾಡಿದಾಗ 10ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ತಾತ್ವಿಕವಾಗಿ ಹೇಳಿದ್ದಾರೆ. ಅದಕ್ಕೆ ಎಕ್ಸ್‌ಟರ್ನಲ್ ಅಸಿಸ್ಟೆನ್ಸ್ ಉಪಯೋಗ ಮಾಡುವುದೇ, ಅಥವಾ ಇಲ್ಲಿರತಕ್ಕಂಥ ಖಾಸಗೀಯವರನ್ನು ಉಪಯೋಗ ಮಾಡುವುದೇ, ಈ ರೀತಿ ಸಮಗ್ರವಾಗಿ ಅನುಷ್ಠಾನ ಮಾಡತಕ್ಕಂಥಾದ್ದನ್ನು 93-94ನೇ ಇಸವಿಯಲ್ಲೇ ಕಾರ್ಯಕ್ರಮ ಪ್ರಾರಂಭ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಆ ದಿಸೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹಿಂದೆಯೂ ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ವರ್ತುಲ ರೈಲ್ವೆ ಬಗ್ಗೆ ಮಾತನಾಡುತ್ತಿದ್ದರು. ಒಟ್ಟಾರೆ, ಸಾರ್ವಜನಿಕ ಸಾರಿಗೆ – ಸಂಪರ್ಕ ಮತ್ತೆ ಈ ಸರ್ಕಾರದ್ದು ಆಗಿರಬಹುದು ಅಥವಾ ಆಂಧ್ರಪ್ರದೇಶದ ಸರ್ಕಾರದ್ದು ಇರಬಹುದು. ಈ ನಗರೀಕರಣದ ನೀತಿ ಏನಿದೆ, ನೀವು ಮಾಡುತ್ತಿರುವ ಕೆಲಸ ಏನಿದೆ, ಅದರ ಬಗ್ಗೆ ನಮ್ಮ ಹಳ್ಳಿ ಕಡೆ ಒಂದು ಮಾತು ಆಡುತ್ತಾರೆ. "ಎಲ್ಲಾ ಬಿಟ್ಟ, ಮಗ ಭಂಗಿ ನೆಟ್ಟ" ಅಂತ. ಇದಕ್ಕೆ ಎರಡು ಸಾವಿರ ಕೋಟಿ ರೂಪಾಯಿ ಖರ್ಚಾಗುತ್ತದೆಂದು ನನಗೆ ಬಂದಿರುವ ಮಾಹಿತಿ. ಸುಮ್ಮನೆ ಒಂದು ಸಾವಿರ ಕೋಟಿ ಎಂದು ಹೇಳುತ್ತಾರೆ. ಈ ವರ್ತುಲ ರೈಲ್ವೆಗೆ ಎರಡು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಲಿಕ್ಕೆ ಹೊರಟಿದ್ದೀರಲ್ಲಾ ? ನಿಮಗೆ ಏನಾದರೂ ರೀತಿ ನೀತಿ ಇದೆಯೇ ? ಮಾಡಬೇಕಾದ ಕೆಲಸಗಳು ಬಹಳಷ್ಟು ಇವೆ. ಇದು ಒಟ್ಟಾರೆ ಸಾರಿಗೆ ಮತ್ತು ಸಂಪರ್ಕದ ವಿಚಾರ. ನಮ್ಮ ಗ್ರಾಮಾಂತರ ಪ್ರದೇಶದ ಸಾರಿಗೆ ಸಂಪರ್ಕ ಏನಾಗಿದೆ ಎಂದು ತಮಗೆ ಗೊತ್ತಾಗುವುದಿಲ್ಲ. ಏಕೆಂದರೆ ನೀವು ಯಾವುದೇ ನಿಮ್ಮ ಸ್ನೇಹಿತರ ಮದುವೆ ಹೋಗಬೇಕಾದರೂ ಹೆಲಿಕ್ಯಾಪ್ಟರ್‌ನಲ್ಲಿ ಹೋಗುತ್ತೀರಿ. ಹೆಲಿಕಾಪ್ಟರ್‌ನ ಖರ್ಚು ಎಷ್ಟು ಎಂದು ಆಮೇಲೆ ಲೆಕ್ಕ ತೆಗೆದುಕೊಳ್ಳೋಣ. ಇದು ಬಹಳ ಮುಖ್ಯ. ಇದನ್ನು ಕೈ ಬಿಡಬೇಕೆಂದು ಮತ್ತೆ ವಿಚ್ಛರಿಕೆ ಕೊಡುತ್ತಿದ್ದೇನೆ. ಇಲ್ಲದಿದ್ದರೆ ಗ್ರಾಮಾಂತರ ಪ್ರದೇಶದ ಜನ ಬಂದು ಕಂಪಿ ಕಿತ್ತಾಕುತ್ತಾರೆ.

ಶ್ರೀ ಆಂಜನಮೂರ್ತಿ:– ಮಾನ್ಯ ಸಭಾಧ್ಯಕ್ಷರೇ, ಒಂದು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ ವರ್ತುಲ ರೈಲ್ವೆ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ನಕ್ಷೆ ಏನಾದರೂ ತಯಾರು ಮಾಡಿದ್ದಾರೋ ? ಬೆಂಗಳೂರು ನಗರಕ್ಕೆ ಅತಿ ಸಮೀಪದಲ್ಲೇ ಇರುವ ತಾಲ್ಲೂಕುಗಳನ್ನು ಈ ವರ್ತುಲ ರೈಲ್ವೇ ಕಾರ್ಯಕ್ರಮದ ಅಡಿಯಲ್ಲಿ ಸೇರಿಸಿದ್ದೀರಾ ? ಅದರಲ್ಲೂ ವಿಶೇಷವಾಗಿ ನೆಲಮಂಗಲ, ದೇವನಹಳ್ಳಿ ತಾಲ್ಲೂಕುಗಳು.

ಶ್ರೀ ಎಂ. ವೀರಪ್ಪಮೊಯಿಲಿ:– ಪ್ರೊಫೆಸರ್ ನಂಜುಂಡಸ್ವಾಮಿಯವರು ಒಂದು ಪ್ರಶ್ನೆ ಎತ್ತಿದ್ದಾರೆ. ಗ್ರಾಮಾಂತರ ಪ್ರದೇಶದ ರೈತರಿಂದ ಒಂದು ನಯೇಪೈಸೆ ಕೂಡಾ ಖರ್ಚಾಗದ ಹಾಗೆ ನೋಡಿಕೊಳ್ಳುತ್ತೇವೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ:– ನಿಮ್ಮ ತತ್ವದ ಮೂಲದಲ್ಲೇ ತಪ್ಪಿದೆ.

ಶ್ರೀ ಎಂ. ವೀರಪ್ಪಮೊಯಿಲಿ:– ತಾವು ಅರ್ಥ ಮಾಡಿಕೊಳ್ಳದೆ ಏಕೆ ಮಾತನಾಡುತ್ತೀರಿ ? ಬಾಕಿಯವರು ಹೇಳುವಂಥ ಮಾತನ್ನು ಕೇಳುವಂಥ ಸೌಜನ್ಯವನ್ನು ತಾವು ಕಲಿತುಕೊಳ್ಳಬೇಕಾಗುತ್ತದೆ. ಬಾಕಿಯವರ ಪಾಪ ಕೂಡ ಏಕ ಮುಖವಾಗಿರುವುದಿಲ್ಲ. ಪಾಪ ಬಹುಮುಖವಾಗಿ ಇರುತ್ತದೆ.

ಪಕಮುಖಿ ಪಾದದಿಂದ ಯಾವುದೇ ವ್ಯಕ್ತಿ ಅವನು ಸಂಪನ್ನನಾಗುವುದಕ್ಕೆ ಸಾಧ್ಯವಿಲ್ಲ. ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಗ್ರಾಮಾಂತರ ಪ್ರದೇಶದ ಸಾರಿಗೆ ವ್ಯವಸ್ಥೆಯೂ ಅಭಿವೃದ್ಧಿಯಾಗಬೇಕಾಗುತ್ತದೆ. ತಾವು ಈ ಕಾನ್‌ಸೆಪ್ಟ್‌ನ್ನು ತಿಳಿದುಕೊಳ್ಳದೆ ಬರೀ ಪತ್ರಿಕೆಯಲ್ಲಿ ಬಂದ ವರ್ತಮಾನವನ್ನು ತಿಳಿದು ತೀರ್ಮಾನ ಮಾಡಿತಕ್ಕಂಥಾದ್ದು ನಮಗಾಗಲೀ ತಮಗಾಗಲೀ ಯೋಗ್ಯವಾಗಿರುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡಿಸುವುದಕ್ಕೂ ಯೋಜನೆಗಳನ್ನು ಮಾಡುತ್ತಿದ್ದೇವೆ. ಪೇಟೆಯವರು ಸಾಯುವೇಕು ಗ್ರಾಮಾಂತರ ಜನ ಬದುಕಬೇಕು ಎಂಬ ಪಾಲಿಸಿ ಸರಿಯಲ್ಲ. ಗ್ರಾಮಾಂತರ ಜನ ಕೂಡ ಬದುಕಬೇಕು. ನಗರದ ಜನ ಕೂಡ ಬದುಕಬೇಕು. ಈ ದೇಶದ ಜನ ನಮ್ಮಿಂದಿಲ್ಲಿಂದ ಬಾಳಬೇಕೆಂಬುದೇ ನಮ್ಮ ಗುರಿ.

Prof. M.D. NANJUNDASWAMY:- I was talking.

SRI M. VEERAPPA MOILY:- I am on my legs. Let there be some minimum deicipline if not the maximum discipline. I am on my legs.

ಇದರ ಬಗ್ಗೆ ಚರ್ಚೆ ಮಾಡೋಣ. ತಾವು ಹೇಳಿದಂಥ ಸೈದ್ಧಾಂತಿಕ ವಾದಕ್ಕೆ ನಾನೂ ಒಪ್ಪುತ್ತೇನೆ. ನಗರದ ಪ್ರದೇಶದ ಜನ ತಾವೇ ಆ ಭಾರವನ್ನು ಹೊತ್ತು. We are going to levy only on the urban people. ಇದರ ಬಗ್ಗೆ ಗ್ರಾಮಾಂತರ ಜನರ ಮೇಲೆ ಭಾರ ಬರುವುದಿಲ್ಲ. ಮತ್ತೊಂದನ್ನು ತಾವು ನೆನಪಿಟ್ಟುಕೊಳ್ಳಬೇಕು, ಗ್ರಾಮಾಂತರ ಪ್ರದೇಶದ ಜನ ನಗರಕ್ಕೆ ಅವರ ವ್ಯಾಪಾರ ವಹಿವಾಟು ನಡೆಸುವುದಕ್ಕೆ ಬರಬೇಕಾಗುತ್ತದೆ. ಬೆಂಗಳೂರು ನಗರದ ಸುತ್ತ ಕೋಟೆ ಕಟ್ಟಿ ಗ್ರಾಮಾಂತರ ಪ್ರದೇಶದ ಜನ ಬೆಂಗಳೂರಿಗೆ ಬರಬಾರದೆಂದು ಮಾಡಿ ಬಹುಶಃ ತಮ್ಮನ್ನೂ ಇರಲಿಕ್ಕಿಲ್ಲ. ಅವರಿಗೂ ಸಹ ಒಂದು ಯೋಗ್ಯವಾದ ಸಂಪರ್ಕ ಒದಗಿಸುವುದಕ್ಕೆ ಇದು ಹೆಚ್ಚು ಪ್ರಯೋಜನ ಆಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಉತ್ಪತ್ತಿಯಾಗುವ ಕೃಷಿ ವಸ್ತುಗಳು ನಗರಕ್ಕೆ ಬಂದು ಮಾರಾಟವಾಗಬೇಕಾಗುತ್ತದೆ. ಯಾವಾಗಲೂ ನಗರ ಮತ್ತು ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಪೂರಕವಾಗಿರಬೇಕೇ ಹೊರತು ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಹೋಗುವುದಕ್ಕೆ ನನ್ನ ಒಪ್ಪಿಗೆ ಇಲ್ಲ. ಯಾವುದೇ ನಗರವಾಗಲೀ ಗ್ರಾಮಾಂತರ ಪ್ರದೇಶಗಳಿಗೆ ಭಾರವಾಗಿರಬಾರದು. ಇದರ ಬಗ್ಗೆ ಏನು ಸೈದ್ಧಾಂತಿಕ ವಾದವನ್ನು ಹೇಳಿದ್ದೀರಿ ಅದನ್ನು ನಾನು ಒಪ್ಪುತ್ತೇನೆ. I can very well understand your concern and I am also concerned about it. ಏಕೆಂದರೆ ನಗರದಲ್ಲೇ ನಗರೀಕರಣವಾಗತಕ್ಕಂಥಾದ್ದು ನಗರದಲ್ಲೇ ಸಂಪತ್ತಿನ ಉತ್ಪಾದನೆಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುವುದು, ಗ್ರಾಮಾಂತರ ಪ್ರದೇಶಗಳನ್ನು ಕಡೆಗಣಿಸತಕ್ಕ ಪ್ರವೃತ್ತಿ ಯಾವುದೇ ರಾಷ್ಟ್ರದ ಅಭಿವೃದ್ಧಿಯಲ್ಲಿ ಸರಿಯಲ್ಲ. ಅದು ಪ್ರವೃತ್ತಿ ಕೂಡ ಅಲ್ಲ.

ಪ್ರೊ: ಎಂ. ಡಿ. ನಂಜುಂಡಸ್ವಾಮಿ:- ಒಂದೇ ಒಂದು ವಿಷಯ. I was exactly raising the issue of urbansation. ಇದರ ನಗರೀಕರಣದ ಸರಿತಿ ಬಗ್ಗೆಯೇ ನಾನು ಮಾತನಾಡುತ್ತಿರುವುದು. ಯಾವ ರೀತಿ ನಗರೀಕರಣವಾಗುತ್ತಿದೆ ? ಕೊಳಚೆ ನಿರ್ಮಾಣವಾಗುತ್ತಿದೆ An ugly kind of urbanisation has been going on and I think that has to be stopped. ನಮ್ಮ ನಗರಗಳು ಸುಂದರವಾಗಿ ಇರಬೇಕು ಎಂದು ಹೇಳುವವರು ನಾವು.

ಅಧ್ಯಕ್ಷರು:- ತಾವು ಬೇರೆ ರೀತಿಯಿಂದ ಈ ವಿಷಯವನ್ನು ಪ್ರಸ್ತಾಪ ಮಾಡಿ.

Prof. M.D. NANJUNDASWAMY:- I am only registering my protest on this so called circular railway.